ಹೋಗಲ್ಲ...' ಎಂದು ಹಟ ಹಿಡಿದು ಊಟವನ್ನೂ ಮಾಡದೆ ಮಲಗಿಬಿಟ್ಟಳು.

ಮುಂದಿನ ಭಾನುವಾರದ ಹೊತ್ತಿಗೆ ಕೇಶವ ಸುನಂದಾಳ ಶಾಲೆಯಿಂದ ವರ್ಗಾವಣೆ ಪತ್ರವನ್ನೂ ಬರೆಸಿಕೊಂಡು ಬಂದಿದ್ದ. ಅಂದು ಬೆಳಿಗ್ಗೆ ತನ್ನ ಬಟ್ಟೆಗಳನ್ನು ಬ್ಯಾಗಿಗೆ ತುಂಬುತ್ತಿದ್ದ ಮಮ್ಮಿಯನ್ನು ಕಂಡು ಸುನಂದಾಳಿಗೆ ಅಳು ಬಂದಿತು. ಕಣ್ಣೀರು ಒರೆಸಿಕೊಂಡು ಏನೊಂದೂ ಮಾತನಾಡದೆ ಸಿದ್ಧವಾಗಿ ತನ್ನ ಡ್ಯಾಡಿಯ ಹಿಂದೆ ಹೊರಟು ಬಸ್ಸಿನಲ್ಲಿ ಕುಳಿತಳು. ಮನೆಗೆ ಮರಳಿ ಬಂದ ಮಗಳನ್ನು ಕಂಡು ಸಂಪಿಗಮ್ಮನಿಗೆ ಒಂದು ಕಡೆ ದುಃಖವೂ ಇನ್ನೊಂದು ಕಡೆ ಸಂತೋಷವೂ ಒಟ್ಟಿಗೇ ಆದವು. ಸುನಂದಾಳನ್ನು ಅಣ್ಣನ ಮನೆಗೆ ತಲುಪಿಸಿದ ಕೇಶವನಿಗೆ ಅಲ್ಲಿ ಒಂದು ಕ್ಷಣವೂ ನಿಲ್ಲಲಾಗಲಿಲ್ಲ. 'ಬರ್ತೀನಿ...' ಎಂದು ಹೇಳಿದವನೇ ಹೊಸ್ತಿಲು ದಾಟಿ ಹಿಂತಿರುಗಿ ನೋಡದೇ ರಸ್ತೆಯ ಕಡೆಗೆ ಸರಸರನೆ ನಡೆದ. 'ಡ್ಯಾಡೀ... ಮತ್ತೆ ಬರ್ತೀರಾ ಡ್ಯಾಡೀ...' ಎಂದು ಕೂಗಿಕೊಂಡ ಸುನಂದಾಳ ಕಣ್ಣುಗಳಿಂದ ಕಣ್ಣೀರು ಧಾರೆಯಾಗಿ ಹರಿಯುತ್ತಿತ್ತು.


**ಟಿ. ತಿಮ್ಮಪ್ಪ**

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ತಿಪ್ಪೂರು ತಿಮ್ಮಪ್ಪ ಅವರ ಊರು. ಅವರ ಮೊದಲ ಕಾದಂಬರಿ 'ಜಂಬೂಕ' 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿತ್ತು. ಅವರು ಪ್ರಸ್ತುತ ತುಮಕೂರಿನ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಆಯ್ಕೆ ಶ್ರೇಣಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ಈ ಲೇಖಕರ ಸುಮಾರು ಇಪ್ಪತ್ತು ಕಿರುಗತೆ, ಸಣ್ಣಕತೆ, ನೀಳ್ಗತೆಗಳು 'ಸುಧಾ', 'ಮಯೂರ' ಮತ್ತಿತರ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.